ದಿನಾಂಕ 21-01-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಿಂದಃ**

ನಾನು ದ್ವಿತೀಯ ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಿಪಿ 2 ರ ಖರೀದಿ ವಚನ ಪತ್ರವು ನನ್ನ ತಂದೆ ಮತ್ತು 1 ನೇ ಪ್ರತಿವಾದಿಯ ನಡುವೆ ದಿನಾಂಕ 24-12-2009 ರಂದು ನಡೆದಿರುತ್ತದೆ. ಸದರಿ ಪತ್ರವು ಸರ್ವೆ ನಂ.92/1 ಮತ್ತು 92/7 ರ ಆಸ್ತಿಗಳ ಕುರಿತು ನಡೆದಿರುತ್ತದೆ. ಸದರಿ ಎರಡೂ ಆಸ್ತಿಗಳನ್ನು ಒಟ್ಟು ರೂ.3,25,000/- ಕ್ಕೆ ಖರೀದಿ ಮಾತುಕತೆಯಾಗಿರುತ್ತದೆ. ಒಟ್ಟು 3 ಎಕರೆ 17 ಗುಂಟೆ ಆಸ್ತಿ ಕುರಿತು ಖರೀದಿ ವಚನ ಪತ್ರ ಆಗಿತ್ತು. ಸದರಿ ಖರೀದಿ ವಚನ ಪತ್ರದ ಸಮಯದಲ್ಲಿ ನನಗೆ 19 ವರ್ಷ ವಯಸ್ಸಾಗಿತ್ತು. ಈಗ ನನಗೆ 35 ವರ್ಷ ವಯಸ್ಸು ಆಗಿರುತ್ತದೆ.

2. ನಿಪಿ 3 ರ ನೋಟೀಸನ್ನು ಖರೀದಿ ವಚನ ಪತ್ರದ 14 ವರ್ಷಗಳ ನಂತರ ನೀಡಿರುತ್ತೇವೆ. ಸದರಿ ನೋಟೀಸನ್ನು ನನ್ನ ತಂದೆ ನೀಡಿದ್ದರು. ಸದರಿ ನೋಟೀಸ್ ಪ್ರತಿವಾದಿಗಳಿಗೆ ಜಾರಿಯಾಗಿರುತ್ತದೆ. ಆ ರೀತಿ ಯಾವುದೇ ನೋಟೀಸ್ ಜಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 3 ರ ನೋಟೀಸ್ ನಲ್ಲಿ ವಾದ ಪತ್ರದಲ್ಲಿ ಯಾವ ಕಾರಣಕ್ಕೆ ತಡವಾಗಿ ನೋಟೀಸ್ ನೀಡಿರುತ್ತೇವೆ ಎಂದು ತಿಳಿಸಿರುತ್ತೇವೆ. ಆ ರೀತಿ ಯಾವುದೇ ಕಾರಣಗಳನ್ನು ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನಮ್ಮ ಊರಿನವರೇ ಆದ ಕಾರಣ ನಮ್ಮ ತಂದೆಗೆ ಪರಿಚಯ ಇರುತ್ತದೆ. ಆತನು ಕೃಷಿಕನಾಗಿದ್ದನು. ನಮಗೆ ಸಂಬಂಧಿಸಿದಂತೆ ದಲ್ಲಾಳಿ ಅಂಗಡಿ ಇದೆ ಎಂದರೆ ಸರಿ. ಸದರಿ ಅಂಗಡಿಯ ಹೆಸರು ಕೆಂಪಣ್ಣ ಟ್ರೇಡಿಂಗ್ ಕಂಪನಿ ಆಗಿರುತ್ತದೆ. ಸುಮಾರು 33 ವರ್ಷಗಳಿಂದ ಸದರಿ ದಲ್ಲಾಳಿ ಅಂಗಡಿ ಇರುತ್ತದೆ.

3. 1 ನೇ ಪ್ರತಿವಾದಿಯು ತಾನು ಬೆಳೆದ ಬೆಳೆಗಳನ್ನು ನಮ್ಮ ಅಂಗಡಿಗೆ ಮಾರಾಟ ಮಾಡುತ್ತಿದ್ದರು ಎಂದರೆ ಸರಿ. ಆ ಕಾರಣ ಆತನಿಗೆ ಕೈಗಡ ಸಾಲ ನೀಡುತ್ತಿದ್ದೆವು ಎಂದರೆ ಸರಿಯಲ್ಲ. ನಮ್ಮ ಮತ್ತು 1 ನೇ ಪ್ರತಿವಾದಿಯ ನಡುವೆ ವ್ಯವಹಾರಿಕವಾಗಿ ಆತ್ಮೀಯತೆ ಇತ್ತು ಎಂದರೆ ಸರಿ.

1 ನೇ ಪ್ರತಿವಾದಿ ತನ್ನ ಅವಶ್ಯಕತೆಗಾಗಿ ರೂ.2,00,000/- ಕೈಗಡ ಸಾಲ ಪಡೆದಿದ್ದರು ಎಂದರೆ

ಸರಿಯಲ್ಲ. 1ನೇ ಪ್ರತಿವಾದಿ ನನ್ನ ತಂದೆಯ ಬಳಿ ಕೈಗಡ ಸಾಲ ಪಡೆಯುತ್ತಿದ್ದರು ಎಂದರೆ ಸರಿಯಲ್ಲ. ಆ ರೀತಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಈ ದಾವೆಯನ್ನು ನಾನು ನನ್ನ ತಂದೆಯ ಜಿಪಿಎ ಹೋಲ್ಡರ್ ಆಗಿ ಹೂಡಿದ್ದು ನಿಪಿ 1 ನ್ನು ಈ ಪ್ರಕರಣಕ್ಕೆ ಮಾತ್ರ ಬರೆದುಕೊಡಲಾಗಿರುತ್ತದೆ. ನಿಪಿ 1 ರ ಸಮಯದಲ್ಲಿ ನನ್ನ ತಂದೆಗೆ ಸುಮಾರು 52 ವರ್ಷ ವಯಸ್ಸಾಗಿತ್ತು. ನನ್ನ ತಂದೆಗೆ ಈ ದಾವೆ ಹೂಡಿ ಸಾಕ್ಷಿ ನುಡಿಯಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಆತನಿಗೆ ಕಣ್ಣಿನ ಸಮಸ್ಯೆ ಹಾಗೂ ಶುಗರ್ ಇರುವುದಾಗಿ ನುಡಿಯುತ್ತಾರೆ. ಆ ಕುರಿತು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸದರಿ ಖಾಯಿಲೆಗಳ ಕುರಿತು ನಿಪಿ 1 ರಲ್ಲಿ ತಿಳಿಸಿರುತ್ತೇವೆ. ಸದರಿ ಖಾಯಿಲೆಯು ಸುಮಾರು 7-8 ವರ್ಷಗಳಿಂದ ಇರುತ್ತದೆ. ಆ ರೀತಿ ಯಾವುದೇ ಖಾಯಿಲೆಗಳು ಇಲ್ಲದೇ ಇದ್ದರೂ ಸಹ ಉದ್ದೇಶಪೂರ್ವಕವಾಗಿ ನಿಪಿ 1ನ್ನು ಬರೆಸಿಕೊಂಡು ನಾನು ಈ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.